**ಕರ್ನಾಟಕ ಸರ್ಕಾರ**

ಸಂಖ್ಯೆ: MED/261/MPS/2019

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 29.05.2020

# ಸುತ್ತೋಲೆ

ರಾಜ್ಯದಲ್ಲಿ ಹೊಸದಾಗಿ ಖಾಸಗಿ ನರ್ಸಿಂಗ್ ಶಾಲೆ/ಕಾಲೇಜು/ಪ್ಯಾರಾಮೆಡಿಕಲ್/ ಫಿಸಿಯೋಥೆರಪಿ ಕಾಲೇಜು/ಅಲೈಡ್ ಹೆಲ್ತ್ ಸೈನ್ಸಸ್ ಸಂಸ್ಥೆಗಳನ್ನು ಪ್ರಾರಂಭಿಸಲು/ ಹೆಚ್ಚುವರಿಯಾಗಿ ಕೋರ್ಸ್ ಗಳನ್ನು ಪ್ರಾರಂಭಿಸಲು/ಹಾಲಿ ಚಾಲ್ತಿಯಲ್ಲಿರುವ ಕೋರ್ಸ್‌ಗಳ ಪ್ರವೇಶ ಮಿತಿಯನ್ನು ಹೆಚ್ಚಿಸಲು/ಹೆಸರು ಮತ್ತು ವಿಳಾಸ ಬದಲಾವಣೆ ಮಾಡಲು ಮಂಜೂರಾತಿ/ಸಂಯೋಜನೆ ನೀಡುವ ಸಂಬಂಧ ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತು/ಪ್ಯಾರಾ ಮೆಡಿಕಲ್ ಬೋರ್ಡ್/ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಸರ್ಕಾರಕ್ಕೆ ಪ್ರಸ್ತಾವನೆಗಳು ಸಲ್ಲಿಕೆಯಾಗುತ್ತಿವೆ. ಈ ರೀತಿ ವಿವಿಧ ಪ್ರಾಧಿಕಾರಗಳಿಂದ ಸರ್ಕಾರದಲ್ಲಿ ಸ್ವೀಕರಿಸಲ್ಪಡುವ ಪ್ರಸ್ತಾವನೆಗಳನ್ನು ಸುತ್ತೋಲೆ ಸಂ:ಆಕುಕ 22 ಎಂಪಿಎಸ್ 2005, ದಿನಾಂಕ: 02.07.2007ರನ್ವಯ ಉನ್ನತಾಧಿಕಾರ ಸಮಿತಿ ಸಭೆಯ ಪರಿಶೀಲನೆಗಾಗಿ ಮಂಡಿಸಲಾಗುತ್ತಿದ್ದು, ಸದರಿ ಸಮಿತಿಯು ಸಂಸ್ಥೆಗಳು ಹೊಂದಿರಬೇಕಾದ ಅಗತ್ಯ ಮೂಲಭೂತ ಸೌಕರ್ಯ ಹಾಗೂ ಇನ್ನಿತರೆ ದಾಖಲಾತಿಗಳ ಬಗ್ಗೆ ಪರಿಶೀಲಿಸಿದ ನಂತರ ಪ್ರತಿ ಪ್ರಸ್ತಾವನೆಗಳ ಕುರಿತು ಸೂಕ್ತ ಶಿಫಾರಸ್ಸು ಮಾಡುತ್ತಲಿದೆ.

ರಾಜ್ಯದಲ್ಲಿ ಹೊಸದಾಗಿ ಖಾಸಗಿ ನರ್ಸಿಂಗ್ ಶಾಲೆ/ಕಾಲೇಜು/ಪ್ಯಾರಾಮೆಡಿಕಲ್/ ಫಿಸಿಯೋಥೆರಪಿ ಕಾಲೇಜು/ಅಲೈಡ್ ಹೆಲ್ತ್ ಸೈನ್ಸಸ್ ಸಂಸ್ಥೆಗಳ ಕಾರ್ಯಕ್ಷಮತೆ ಹಾಗೂ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಮತ್ತು ಸದರಿ ಕ್ಷೇತ್ರಗಳಲ್ಲಿನ ಶೈಕ್ಷಣಿಕ ಗುಣಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಸಂಸ್ಥೆಗಳು ಹೊಂದಿರಬೇಕಾದ ಮೂಲಭೂತ ಸೌಕರ್ಯಗಳ ಬಗ್ಗೆ ಸ್ಪಷ್ಟತೆಯನ್ನು ಹೊಂದುವ ಸಲುವಾಗಿ ಸರ್ಕಾರದಲ್ಲಿ ಸ್ವೀಕರಿಸಲ್ಪಡುವ ಪ್ರಸ್ತಾವನೆಗಳನ್ನು ಪರಿಶೀಲಿಸಲು ಸೂಕ್ತವಾದ ತಡೆಪಟ್ಟಿ (Check List) ಯನ್ನು ತಯಾರಿಸಿ ಸದರಿ ತಡೆಪಟ್ಟಿಯಲ್ಲಿ ನಮೂದಿಸಿರುವ ಅಂಶಗಳಿಗೆ ಒದಗಿಸುವ ಮಾಹಿತಿಗಳನ್ನಾಧರಿಸಿ ಉನ್ನತಾಧಿಕಾರ ಸಮಿತಿ ಸಭೆಯು ಇನ್ನೂ ಹೆಚ್ಚಿನ ಪರಿಣಾಮಕಾರಿಯಾಗಿ ಸೂಕ್ತ ನಿರ್ಣಯಗಳನ್ನು ಕೈಗೊಳ್ಳತಕ್ಕದ್ದೆಂದು ತೀರ್ಮಾನಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಹೊಸದಾಗಿ ಖಾಸಗಿ ನರ್ಸಿಂಗ್ ಶಾಲೆ/ಕಾಲೇಜು/ಪ್ಯಾರಾಮೆಡಿಕಲ್/ಫಿಸಿಯೋಥೆರಪಿ ಕಾಲೇಜು/ಅಲೈಡ್ ಹೆಲ್ತ್ ಸೈನ್ಸಸ್ ಸಂಸ್ಥೆಗಳನ್ನು ಪ್ರಾರಂಭಿಸಲು/ಹೆಚ್ಚುವರಿಯಾಗಿ ಕೋರ್ಸ್ ಗಳನ್ನು ಪ್ರಾರಂಭಿಸಲು/ಹಾಲಿ ಚಾಲ್ತಿಯಲ್ಲಿರುವ ಕೋರ್ಸ್‌ಗಳ ಪ್ರವೇಶ ಮಿತಿಯನ್ನು ಹೆಚ್ಚಿಸಲು/ಹೆಸರು ಮತ್ತು ವಿಳಾಸ ಬದಲಾವಣೆ ಮಾಡಲು ಮಂಜೂರಾತಿ / ಸಂಯೋಜನೆ ನೀಡುವ ಕುರಿತಂತೆ ಸರ್ಕಾರಕ್ಕೆ ಸಲ್ಲಿಸುವ ಪ್ರಸ್ತಾವನೆಗಳನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧ-1 ರಿಂದ 04 ರವರೆಗಿನ ಸಂಬಂಧಪಟ್ಟ ತಡೆಪಟ್ಟಿಗಳನ್ವಯ ಪೂರ್ಣ ಮತ್ತು ಸ್ಪಷ್ಟ ಮಾಹಿತಿಗಳೊಂದಿಗೆ ಸಲ್ಲಿಸತಕ್ಕದ್ದು.

Govt. of Karnataka
02 JUN 2020
DME Para Medical Board B'lore

ಮುಂದುವರೆದು, ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತು, ಪ್ಯಾರಾ ಮೆಡಿಕಲ್ ಬೋರ್ಡ್ ಹಾಗೂ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಚಾಲ್ತಿಯಲ್ಲಿರುವ ಕ್ಯಾಲೆಂಡರ್ ಆಫ್ ಇವೆಂಟ್ಸ್ ಪ್ರಕಾರ ಸಂಬಂಧಿತ ಸಂಸ್ಥೆ/ಸೊಸೈಟಿ/ಕಾಲೇಜುಗಳಿಂದ ಅರ್ಜಿಗಳನ್ನು ಸ್ವೀಕರಿಸಿ ನಿಯಮಾನುಸಾರ ತಪಾಸಣಾ ಕಾರ್ಯವನ್ನು ಕೈಗೊಂಡು ಸಕ್ಷಮ ಪ್ರಾಧಿಕಾರಗಳ ಸ್ಪಷ್ಟ ಶಿಫಾರಸ್ಸಿನೊಂದಿಗೆ ಹಾಗೂ ದೃಢೀಕೃತ(Attested) ದಾಖಲೆಗಳೊಂದಿಗೆ ಪ್ರತ್ಯೇಕವಾದ ಪ್ರಸ್ತಾವನೆಗಳನ್ನು ನಿಗದಿತ ಕಾಲಮಿತಿಯಲ್ಲಿ ಸರ್ಕಾರದ ಪರಿಶೀಲನೆಗಾಗಿ ಸಲ್ಲಿಸುವುದು. ಅಲ್ಲದೆ ಉನ್ನತಾಧಿಕಾರ ಸಮಿತಿ ಸಭೆಯು ನಡೆಯುವ ದಿನದಂದು ಅಥವಾ ಅದರ ಹಿಂದಿನ ದಿನದಂದು ತರಾತುರಿಯಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸದೇ ಆದಷ್ಟು ಮುಂಚಿತವಾಗಿ ಪ್ರಸ್ತಾವನೆಗಳನ್ನು ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತು ಮತ್ತು ಪ್ಯಾರಾ ಮೆಡಿಕಲ್ ಬೋರ್ಡ್‌ಗೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ನೇರವಾಗಿ ಸಲ್ಲಿಸದೇ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯರವರ ಮುಖಾಂತರ ಹಾಗೂ ನಿರ್ದೇಶನಾಲಯದ ಮುಖಪುಟದೊಂದಿಗೆ ಪ್ರತ್ಯೇಕವಾಗಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ, ಅಂತಹ ಪ್ರಸ್ತಾವನೆಗಳನ್ನು ಯಾವುದೇ ರೀತಿಯ ಪರಿಶೀಲನೆಗೆ ಒಳಪಡಿಸದೇ ತಿರಸ್ಕರಿಸಲಾಗುವುದೆಂದು ಹಾಗೂ ಸಂಬಂಧಪಟ್ಟವರ ವಿರುದ್ಧ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದೆ.

**(ಬಿ.ಆರ್.ಮಂಜುನಾಥ)**
ಸರ್ಕಾರದ ಅಧೀನ ಕಾರ್ಯದರ್ಶಿ-1,
ವೈದ್ಯಕೀಯ ಶಿಕ್ಷಣ ಇಲಾಖೆ,

**ಇವರಿಗೆ:**
1) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು-560009.
2) ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ 'ಟಿ' ಬ್ಲಾಕ್,ಜಯನಗರ, ಬೆಂಗಳೂರು-560 041.
3) ಸದಸ್ಯ ಕಾರ್ಯದರ್ಶಿಗಳು, ಪ್ಯಾರಾ ಮೆಡಿಕಲ್ ಬೋರ್ಡ್, ಲಕ್ಷ್ಮೀ ಕಾಂಪ್ಲೆಕ್ಸ್, ವಾಣಿವಿಲಾಸ್ ಆಸ್ಪತ್ರೆ ಎದುರು, ಕೋಟೆ, ಬೆಂಗಳೂರು.
4) ರಿಜಿಸ್ಟ್ರಾರ್, ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತು, ಸೂರ್ಯ ಅಪಾರ್ಟ್‌ಮೆಂಟ್, ಮೂವಿ ಲ್ಯಾಂಡ್ ಥಿಯೇಟರ್ ಹತ್ತಿರ, ಗಾಂಧಿನಗರ, ಬೆಂಗಳೂರು.

**ಪ್ರತಿ:**
1) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಯವರ ಆಪ್ತಕಾರ್ಯದರ್ಶಿ,ವೈದ್ಯಕೀಯ ಶಿಕ್ಷಣ ಇಲಾಖೆ.
3) ಸರ್ಕಾರದ ಉಪಕಾರ್ಯದರ್ಶಿಯವರ ಆಪ್ತ ಸಹಾಯಕರು, ವೈದ್ಯಕೀಯ ಶಿಕ್ಷಣ ಇಲಾಖೆ.

# Checklist

## ಅನುಬಂಧ-01

## (D) Permission for New Para Medical College

**(General requirements)**

| Sl No | Particulars | Prescribed as per guidelines | Existing Facilities | Remarks Whether complied or not | Page no |
|---|---|---|---|---|---|
| 1 | **Name & Complete address of the Institution** | | | Full name or abrivated & Unique in the state or not | |
| 2 | **Course applied and with intake** | | | | |
| 3 | **Name of the Trust/Society & Deed** | | | Deed Submitted or not | |
| 4 | **Date of registration** | | | Min.03 years elapsed | |
| 5 | **Minimum Age of the Trust/Society** | 03 YEARS | | Eligible or not | |
| 6 | **If new course, courses applied for** | | | | |
| 7 | **Audit Statement for past 03 years (Trust)** | 1) | | Submitted or not | |
| | | 2) | | Submitted or not | |
| | | 3) | | Submitted or not | |
| 8 | **Financial worthiness** | Current Account with 15 Lakh-turnover for last 03 finacial years(cumulative) | | Eligible or not | |
| 9 | **Clinical Facilities** | | | | |
| | **A. Own Hospital/Nursing Home** | Minimum 100 Beds | | yes/No | |
| | **i. OPD per day** | Last 03 month | | yes/No | |
| | **ii. IPD per day** | Last 03 month | | yes/No | |
| | **B. Affiliated Hospital/Nursing Home** | Minimum 100 Beds | | yes/No | |
| | **i. OPD per day** | Last 03 month | | submitted/not | |
| | **ii. IPD per day** | Last 03 month | | submitted/not | |
| | **iii. Distance from Institution** | city limit 0-10 KM Radius<br>If rural area 0-20 KM Radius | | yes/No | |
| | **iv. MOU Particulars** | Minimum for 03 years | | yes/No | |
| 10 | **Infrastructure** | | | | |
| | **A. Total No of teaching rooms** | | | yes/No | |
| | **B. Laboratory details** | | | yes/No | |
| | **C. Details of Equipments(course Wise)** | | | submitted/not | |
| | **D. Hostel facility for students** | | | yes/No | |
| 11 | **Building Details** | Internal and outernal photo's of the building with college name board. | | submitted/not | |
| | **A. Own Building details** | 1. Owner Details | | yes/No | |
| | | 2. Property No(Local Body PID) | | Available/not | |
| | | 3. Building plan approved by the compitent Authority | | yes/No | |
| | | 4. Upto date Tax paid | | yes/No | |
| | | 5. Any Court cases pending againts the property | | yes/No | |
| | **B. Rent/Leased Building details** | 1. Rent/Lease Agreement (Minimum 05 years) | | In order/not | |
| | | 2. Owner Details | | yes/No | |

Govt. of Karnataka, Para Medical Board, B'lore
02/06/2020

| | | | | | |
|---|---|---|---|---|---|
| 12 | **Information of Density of Para medical colleges in the location** | Minimum Distance B/W location of 02 colleges should be more than 10 KMs | | | |
| 13 | **Faculty details(Course wise)** | Adhaar No compulsary | | yes/No | |
| 14 | **Vehicle Facility** | Bus facility | | yes/No | |
| 15 | **Sports and Recreation Facilities** | Out Door Facility and Indoor Facility | | yes/No | |
| 16 | **LIC Reports** | A. Name of the Inspector with designation & Address | 1)<br>2)<br>3) | In accordance/not | |
| | | B. Date of Inspection | | | |
| | | C. Recommendation | | | |
| 17 | **Opinion of Special officer, PMB** | | | Accept/reject | |
| 18 | **Opinion of DME** | | | | |

| **Hospital Facilities** | |
|---|---|
| 1 | **Number of Blood Samples incase of Lab (for DMLT) (Last 3 Months)** |
| 2 | **Only Dental College are eligible to apply for DDM & DDH Course** |
| 3 | **Number of X-Ray, CT Scan, Ultra Sound & MRI- (for Diploma in medical imaging Technology) (Last 3 Months)** |
| 4 | **For Health inspector (Diploma in Healthe Inspector) Course minimum of one Primary health Centre (Mou with Government) (Last 3 Months)** |
| 5 | **No of Operations.-(for Diploma in Operation Theatre and anaesthesia Technology) (Last 3 months)** |
| 6 | **For Dialysis (Diploma in Dialysis Technology)-10 Dialysis per day (Last 3 Months)** |
| 7 | **for Diploma in ophthalmology technology course-Number of eye camps, cataract of surgery(Last 03 months)** |
| 8 | **for Diploma in medical record technology course - Details of 300 beds hospital** |
| 9 | **for seat enhancement minimum 75% of admission is require in each course from last 03 years** |
| 10 | **for seat enhancement minimum 40% of passing percentage is require in each course from last 03 years** |
| 11 | **For address change consent of the students is essential and also prior government order is also required.** |

**Note:**

1. ಈಗಾಗಲೇ ಚಾಲ್ತಿಯಲ್ಲಿರುವ ಪ್ಯಾರಾ ಮೆಡಿಕಲ್ ಕಾಲೇಜುಗಳು ಹಾಗೂ ಹೊಸದಾಗಿ ಪ್ರಾರಂಭವಾಗಿರುವ ಕಾಲೇಜುಗಳು 06 ತಿಂಗಳ ಒಳಗಾಗಿ ತಮ್ಮದೇ ಆದ ವೆಬ್‌ಸೈಟ್‌ನ್ನು ತಯಾರಿಸುವುದು. ಸದರಿ ವೆಬ್‌ಸೈಟ್‌ನಲ್ಲಿ ಕಾಲೇಜಿನ ಸಂಪೂರ್ಣ ವಿವರಗಳನ್ನು ದಾಖಲಿಸುವುದು ಇಲ್ಲದಿದ್ದಲ್ಲಿ Renewal of Affiliation ಅನ್ನು ನೀಡಲಾಗುವುದಿಲ್ಲ.

2. ಪ್ರತಿ 04 ಬೆಡ್‌ಗೆ ಒಬ್ಬ ವಿದ್ಯಾರ್ಥಿ ಇರುವ ರೀತಿಯಲ್ಲಿ ಎಲ್ಲಾ ಪ್ಯಾರಾ ಮೆಡಿಕಲ್ ಸಂಸ್ಥೆಗಳ ವಿದ್ಯಾರ್ಥಿಗಳು ಕ್ಲಿನಿಕಲ್ ಸೌಲಭ್ಯಗಳನ್ನುಪಡೆಯಲು ಅವಕಾಶ ನೀಡುವುದು.